ಉ) ಹೂವಿನ ಮಾರುಕಟ್ಟೆ ಮತ್ತು ಶೀಥಲೀಕರಣ ಕೇಂದ್ರಗಳನ್ನು ಪ್ರಾರಂಭಿಸಲು ಮುಂದೆ ಬರುವ ಸಂಘ ಸಂಸ್ಥೆಗಳು ಅಥವಾ ಖಾಸಗಿಯವರಿಗೆ ಸರ್ಕಾರದ ಯೋಜನೆಗಳಡಿಯಲ್ಲಿ ಅಗತ್ಯವಿರುವ ನೆರವನ್ನು ನೀಡಲಾಗುವುದು.

ಊ) ಹೌದು.

ಋ) ಹೌದು.

1179 (1280) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು ಮತ್ತು ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಿಂದ ಬರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಿಂದ ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿಸಿರುವ / ಸ್ಥಾಪಿಸಲಾಗುವ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಖಂಡಸಾರಿಗಳಿಗೆ ನೀಡಲಾಗಿರುವ ಸಾಲದ ಮೊತ್ತವೆಷ್ಟು? (ಕಾರ್ಖಾನೆವಾರು ವಿವರಗಳನ್ನು ಒದಗಿಸುವುದು)

ಆ) ಈ ಬ್ಯಾಂಕುಗಳಿಂದ ಪಡೆದುಕೊಂಡಿರುವ ಸಾಲದ ಪೈಕಿ ಇಲ್ಲಿಯವರೆಗೆ ಎಷ್ಟು ಸಾಲವನ್ನು ಈ ಕಾರ್ಖಾನೆಗಳು ಮರುಪಾವತಿ ಮಾಡಿವೆ? ಬಾಕಿ ಉಳಿದಿರುವ ಸಾಲವೆಷ್ಟು?

ಇ) ಯಾವ ಯಾವ ಕಾರ್ಖಾನೆಗಳು ಸಾಲ ಮರುಪಾವತಿ ಮಾಡದೇ ಸುಸ್ತಿಯಾಗಿವೆ?

ಈ) ಕಾರ್ಖಾನೆಗಳಿಂದ ಬ್ಯಾಂಕಿಗೆ ಇಂದಿನವರೆಗೆ ಬರಬೇಕಾಗಿರುವ ಅಸಲು, ಬಡ್ಡಿ, ಸುಸ್ತಿ ಬಡ್ಡಿ ಮತ್ತು ಇತರೆ ಬಡ್ಡಿಗಳ ಒಟ್ಟು ಮೊತ್ತವೆಷ್ಟು? (ಕಾರ್ಖಾನೆವಾರು ಪ್ರತ್ಯೇಕ ವಿವರಗಳನ್ನು ಒದಗಿಸುವುದು)

ಉ) ಸದರಿ ಕಾರ್ಖಾನೆಗಳ / ಕಂಡ ಸಾರಿಗಳ ಮುಖ್ಯಸ್ಥರ ಹೆಸರು ಮತ್ತು ಇಂದು ಬ್ಯಾಂಕಿಗೆ ನೀಡಿರುವ ಭದ್ರತೆಯ ವಿವರಗಳೇನು?

ಊ) ಈ ಕಾರ್ಖಾನೆಗಳಿಗೆ ಸುಸ್ತಿಯಾಗಿರುವ ಸಾಲವನ್ನು ವಸೂಲು ಮಾಡಲು ಇಲ್ಲಿಯವರೆವಿಗೆ ಬ್ಯಾಂಕುಗಳಿಗೆ ತೆಗೆದುಕೊಂಡಿರುವ ಶಿಸ್ತಿನ ಕ್ರಮಗಳೇನು?

ಋ) ಸದರಿ ವಿಚಾರದಲ್ಲಿ, ಕ್ರಿಮಿನಲ್ ದಾವೆಗಳನ್ನು ಹೂಡಲಾಗಿದೆಯೇ?

ಎ) ಹಾಗಿಲ್ಲದಿದ್ದಲ್ಲಿ, ಕಾರಣವೇನು?

ಏ) ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜೆ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) ಸಂಗಮ (consortium) ಬ್ಯಾಂಕುಗಳ ಯೋಜನೆಯ ಅಡಿಯಲ್ಲಿ ಕೆನರಾ ಬ್ಯಾಂಕ್, ಬೀದರ್ ಇವರ ಮುಖಂಡತ್ವದಲ್ಲಿ ಖಾಸಗಿ ಖಂಡಸಾರಿ ಸಂಸ್ಥೆಯಾದ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್, ಬೀದರ್ ಜಿಲ್ಲೆ, ಇವರಿಗೆ ಅಪೆಕ್ಸ್ ಬ್ಯಾಂಕು ಮತ್ತು ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಮಂಜೂರು ಮಾಡಿದ ಅವಧಿ ಸಾಲದ ವಿವರಗಳು ಈ ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಸಂಗಮ ಬ್ಯಾಂಕುಗಳ ಹೆಸರು	ಸಾಲದ ಮೊತ್ತ
1	ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ,	300.11
2	ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.	400.00

ಇದಲ್ಲದೆ ಬೀದರ್ ಡಿಸಿಸಿ ಬ್ಯಾಂಕು ಈ ಕೆಳಕಂಡ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಖಾಸಗಿ ಕಾರ್ಖಾನೆಗಳ ಹೆಸರು	ಸಾಲದ ಮೊತ್ತ
1	ಮೇ॥ ಮೈಸೂರ ಖಂಡಸಾರಿ ಮೈಲೂರು ಬೀದರ್	50.00
2	ಮೆ॥ ವಿಷ್ಣು ಖಂಡಸಾರಿ ಮೈಲೂರು ಬೀದರ್	35.00
3	ಮೆ॥ ವಿಶಾಲ ಖಂಡಸಾರಿ ಮನ್ನಳ್ಳಿ	40.00
4	ಮೆ॥ ನ್ಯೂ ಕರ್ನಾಟಕ ಖಂಡಸಾರಿ ಬೀದರ್	33.00
5	ಮೆ॥ ಸಾಯಿ ಖಂಡಸಾರಿ ಕೊಡಂಬಲ	185.00

6	ಮೆ॥ ಜೈ ಹನುಮಾನ ಖಂಡಸಾರಿ ಕೊಡಂಬಲ	40.00
7	ಮೆ॥ ಜ್ಞಾನಯೋಗಿ ಶಿವಕುಮಾರ ಸ್ವಾಮಿ ಇಂಡಿ	200.00
8	ಮೆ॥ ಬಿ.ಕೆ.ಎಸ್.ಕೆ.ಮೊಗದಲ ಮನ್ನಾ ಎಖ್ಖೇಳ್ಳಿ	560.00
	ಒಟ್ಟು	**1143.00**

ಆ) ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್, ಬೀದರ್ ಜಿಲ್ಲೆ, ಇದು ಇಲ್ಲಿಯವರೆಗೆ ಅಪೆಕ್ಸ್ ಬ್ಯಾಂಕಿಗೆ ಯಾವುದೇ ಮರುಪಾವತಿ ಮಾಡದೇ ರೂ.300.11 ಲಕ್ಷಗಳು ಬಾಕಿ ಇರುತ್ತದೆ.

ಬೀದರ್ ಡಿಸಿಸಿ ಬ್ಯಾಂಕಿಗೆ ಬಾಕಿ ಇರುವ ಸಾಲದ ವಿವರಗಳು ಕೆಳಗಿನಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಖಾಸಗಿ ಕಾರ್ಖಾನೆಗಳ ಹೆಸರು	ಮರುಪಾವತಿ ಮಾಡಿದ ಮೊತ್ತ	ಬಾಕಿ ಮೊತ್ತ (ಬಡ್ಡಿ ಹೊರತುಪಡಿಸಿ)
1	ಮೇ॥ ಮೈಸೂರ ಖಂಡಸಾರಿ ಮೈಲೂರು ಬೀದರ್	1.30	48.70
2	ಮೆ॥ ವಿಷ್ಣು ಖಂಡಸಾರಿ ಮೈಲೂರು ಬೀದರ್	4.82	30.18
3	ಮೆ॥ ವಿಶಾಲ ಖಂಡಸಾರಿ ಮನ್ನಳ್ಳಿ	27.54	12.46
4	ಮೆ॥ ನ್ಯೂ ಕರ್ನಾಟಕ ಖಂಡಸಾರಿ ಬೀದರ್	14.98	16.07
5	ಮೆ॥ ಸಾಯಿ ಖಂಡಸಾರಿ ಕೊಡಂಬಲ	20.50	207.81
6	ಮೆ॥ ಜೈ ಹನುಮಾನ ಖಂಡಸಾರಿ ಕೊಡಂಬಲ	–	17.52

7	ಮೆ॥ ಜ್ಞಾನಯೋಗಿ ಶಿವಕುಮಾರ ಸ್ವಾಮಿ ಇಂಡಿ	48.63	151.37
8	ಮೆ॥ ಬಿ.ಕೆ.ಎಸ್.ಕೆ.ಮೊಗದಲ ಮನ್ನಾ ಎಖ್ಖೇಳ್ಳಿ	100.00	667.30
9	ಮೆ॥ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್	4.94	402.4
	ಒಟ್ಟು		

ಇ) ಈ ಕೆಳಕಂಡ ಕಾರ್ಖಾನೆಗಳು ಬ್ಯಾಂಕುಗಳಿಗೆ ಪೂರ್ಣವಾಗಿ ಸಾಲ ಮರುಪಾವತಿಸದೇ ಸುಸ್ತಿಯಾಗಿರುತ್ತವೆ.

1	ಮೇ॥ ಮೈಸೂರ ಖಂಡಸಾರಿ ಮೈಲೂರು ಬೀದರ್
2	ಮೆ॥ ನ್ಯೂ ಕರ್ನಾಟಕ ಖಂಡಸಾರಿ ಬೀದರ್
3	ಮೆ॥ ಸಾಯಿ ಖಂಡಸಾರಿ ಕೊಡಂಬಲ
4	ಮೆ॥ ಜೈ ಹನುಮಾನ ಖಂಡಸಾರಿ ಕೊಡಂಬಲ
5	ಮೆ॥ ಜ್ಞಾನಯೋಗಿ ಶಿವಕುಮಾರ ಸ್ವಾಮಿ ಇಂಡಿ
6	ಮೆ॥ ಬಿ.ಕೆ.ಎಸ್.ಕೆ.ಮೊಗದಲ ಮನ್ನಾ ಎಖ್ಖೇಳ್ಳಿ
7	ಮೆ॥ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್

ಈ) ಮೆ॥ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್, ಇದರಿಂದ ಅಪೆಕ್ಸ್ ಬ್ಯಾಂಕಿಗೆ ಕೆಳಕಂಡಂತೆ ಅಸಲು ಮತ್ತು ಬಡ್ಡಿ ಬರಬೇಕಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ವಿವರ	ಮೊಬಲಗು
ಅಸಲು	300.11
ಬಡ್ಡಿ	78.74
ಸುಸ್ತಿ ಬಡ್ಡಿ	13.86
ಒಟ್ಟು ಸುಸ್ತಿ ಬಾಕಿ	392.71

ಇದಲ್ಲದೆ ಕೆಳಕಂಡ ಕಾರ್ಖಾನೆಗಳು ಬೀದರ್ ಡಿಸಿಸಿ ಬ್ಯಾಂಕಿಗೆ ಪಾವತಿಸಬೇಕಾಗಿರುವ ಅಸಲು ಸುಸ್ತಿ ಬಡ್ಡಿಗಳ ವಿವರ ಕೆಳಗಿನಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಖಾಸಗಿ ಕಾರ್ಖಾನೆಗಳ ಹೆಸರು	ಅಸಲು	ಬಡ್ಡಿ	ಸುಸ್ತಿ ಬಡ್ಡಿ	ಒಟ್ಟು
1	ಮೇ॥ ಮೈಸೂರ ಖಂಡಸಾರಿ ಮೈಲೂರು ಬೀದರ್	48.70	--	–	48.70
2	ಮೆ॥ ನ್ಯೂ ಕರ್ನಾಟಕ ಖಂಡಸಾರಿ ಬೀದರ್	16.07	--	–	16.07
3	ಮೆ॥ ಸಾಯಿ ಖಂಡಸಾರಿ ಕೊಡಂಬಲ	185.00	115.30	–	300.30
4	ಮೆ॥ ಜೈ ಹನುಮಾನ ಖಂಡಸಾರಿ ಕೊಡಂಬಲ	17.52	8.74	–	26.26
5	ಮೆ॥ ಜ್ಞಾನಯೋಗಿ ಶಿವಕುಮಾರ ಸ್ವಾಮಿ ಇಂಡಿ	170.01	–	–	170.01

6	ಮೆ॥ ಬಿ.ಕೆ.ಎಸ್.ಕೆ. ಮೊಗದಲ ಮನ್ನಾ ಎಖ್ಪೇಳ್ಳಿ	560.00	508.24	23.98	1092.22
7	ಮೆ॥ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್	400.00	177.56	–	577.56
	ಒಟ್ಟು	**1397.30**	**809.84**	**23.98**	**2231.12**

ಊ)

ಕ್ರ ಸಂ.	ಖಾಸಗಿ ಕಾರ್ಖಾನೆಯ ಹೆಸರು	ಖಂಡಸಾರಿ ಮುಖ್ಯಸ್ಥರ ಹೆಸರು	ಭದ್ರತೆಯ ವಿವರಗಳು
1	ಮೇ॥ ಮೈಸೂರ ಖಂಡಸಾರಿ ಮೈಲೂರು ಬೀದರ್	ಶ್ರೀಮತಿ ಪಾನಾಬಾಯಿ ಹಂಡ ದಿ.ಕರೋಡಿಮಲ ಬೀದರ್	–
2	ಮೆ॥ ನ್ಯೂ ಕರ್ನಾಟಕ ಖಂಡಸಾರಿ ಬೀದರ್	ಶ್ರೀ ಘನಶ್ಯಾಮದಾಸ ತಂದೆ ಮದನಮೋಹನ ಗೋಯಲ್ ಬೀದರ್	ಕಾರ್ಖಾನೆಯ ಕಟ್ಟಡ ಮತ್ತು ಯಂತ್ರೋಪಕರಣ ಹಾಗೂ ಜಮೀನುಗಳನ್ನು ಬ್ಯಾಂಕಿನ ಹೆಸರಿಗೆ ಅಡವು ಮಾಡಿಕೊಟ್ಟಿರುತ್ತಾರೆ.
3	ಮೆ॥ ಸಾಯಿ ಖಂಡಸಾರಿ ಕೊಡಂಬಲ	ಶ್ರೀ ಡಿ.ಕೆ.ಸಿದ್ರಾಮ ಬೀದರ್	"

4	ಮೆ॥ ಜೈ ಹನುಮಾನ ಖಂಡಸಾರಿ ಕೊಡಂಬಲ	ಶ್ರೀ ರಾಮಪ್ಪಾ ತಂದೆ ರಾಮ ಗೋಪಾಲ ಕೊಡಂಬಲ	"
5	ಮೆ॥ ಜ್ಞಾನಯೋಗಿ ಶಿವಕುಮಾರ ಸ್ವಾಮಿ ಇಂಡಿ	ಶ್ರೀ ಬಸವನಗೌಡ ಪಾಟೀಲ ಯತನಾಳ	"
6	ಮೆ॥ ಬಿ.ಕೆ.ಎಸ್.ಕೆ.ಮೊಗದಲ ಮನ್ನಾ ಎಖ್ಖೇಳ್ಳಿ	ಶ್ರೀ ಮೀರಾಜೋದ್ದೀನ ಎನ್.ಪಟೇಲ್	"
7	ಮೆ॥ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್	ಶ್ರೀ ಬಂಡೆಪ್ಪಾ ಖಾಸೆಂಪೂರ	"

ಊ)

ಕ್ರ. ಸಂ.	ಖಾಸಗಿ ಕಾರ್ಖಾನೆಯ ಹೆಸರು	ತೆಗೆದುಕೊಂಡ ಕ್ರಮ
1	ಮೇ॥ ಮೈಸೂರ ಖಂಡಸಾರಿ ಮೈಲೂರು ಬೀದರ್	ಪ್ರಕರಣದ 70ರಲ್ಲಿ ದಾವೆ ಹೂಡಿ ಅವಾರ್ಡ್ ಪಡೆದಿದ್ದು ಹಲವಾರು ಸಲ ಬಹಿರಂಗ ಹರಾಜಿಗೆ ಇಡಲಾಗಿತ್ತು. ಖರೀದಿದಾರರು ಯಾರು ಬರದೆ ಇದ್ದುದರಿಂದ ಆಸ್ತಿ ಮಾರಾಟ ಆಗಲಿಲ್ಲ.
2	ಮೆ॥ ನ್ಯೂ ಕರ್ನಾಟಕ ಖಂಡಸಾರಿ ಬೀದರ್	ಪ್ರಕರಣದ 70ರಲ್ಲಿ ಅವಾರ್ಡ್ ಪಡೆಯಲಾಗಿದೆ. ಆದರೆ ಕೆ.ಎ.ಟಿ. ನಿಂದ ತಡೆಯಾಜ್ಞೆ ಇದೆ.
3	ಮೆ॥ ಸಾಯಿ ಖಂಡಸಾರಿ ಕೊಡಂಬಲ	ಪ್ರಕರಣ 70ರಲ್ಲಿ ದಾವಾ ಹಾಕಲಾಗಿದೆ. ವಸೂಲಾತಿ ಪ್ರಗತಿ ಯಲ್ಲಿದೆ.

4	ಮೆ॥ ಜೈ ಹನುಮಾನ ಖಂಡಸಾರಿ ಕೊಡಂಬಲ	ಪ್ರಕರಣ 70ರಲ್ಲಿ ದಾವಾ ಹೂಡಿ ಅವಾರ್ಡ್ ಪಡೆದಿದ್ದು ಕೆ.ಎ.ಟಿ. ನಿಂದ ತಡೆಯಾಜ್ಞೆ ಇದೆ.
5	ಮೆ॥ ಜ್ಞಾನಯೋಗಿ ಶಿವಕುಮಾರ ಸ್ವಾಮಿ ಇಂಡಿ	ಪ್ರಕರಣ 70ರಲ್ಲಿ ದಾವೆ ಹೂಡಿ ಅವಾರ್ಡ್ ಪಡೆಯಲಾಗಿದೆ.
6	ಮೆ॥ ಬಿ.ಕೆ.ಎಸ್.ಕೆ.ಮೊಗದಲ ಮನ್ನಾ ಎಖ್ಖೇಳ್ಳಿ	ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದೆ.
7	ಮೆ॥ ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ, ಬರೂರ್	ವಸೂಲಾತಿ ಪ್ರಗತಿಯಲ್ಲಿದೆ. ಕಾರಣ ದಾವೆ ಹೂಡಿರುವುದಿಲ್ಲ. ಪ್ರಶ್ನೆ ಇರುವುದಿಲ್ಲ.

ಋ) ಇಲ್ಲ.

ಎ) ಈ ಕಾರ್ಖಾನೆಗೆ ನೀಡಿರುವ ಸಾಲಗಳ ಬಾಕಿ ವಸೂಲಾತಿಗಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಅಡಿಯಲ್ಲಿ ಸಿವಿಲ್ ಕ್ರಮ ಕೈಗೊಳ್ಳಲಾಗಿರುತ್ತದೆ.

ಏ) ಸುಸ್ತಿ ಬಾಕಿ ವಸೂಲಾತಿ ಮುಖ್ಯವಾಗಿದ್ದು ಆ ಪ್ರಕಾರ ಕ್ರಮ ಜರುಗಿಸಲಾಗಿದೆ.

1170 (12'73) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳನ್ನು ತೋಟಗಾರಿಕಾ ಜಿಲ್ಲೆಗಳೆಂದು ಗುರುತಿಸಲಾಗಿದೆ;

ಆ) ಈ ಜಿಲ್ಲೆಗಳಲ್ಲಿ ತೋಟಗಾರಿಕಾ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಈ ಆಯವ್ಯಯದಲ್ಲಿ ಎಷ್ಟು ಹಣವನ್ನು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡುತ್ತಿದೆ;

ಇ) ಈ ಪೈಕಿ ಇಲ್ಲಿಯವರೆವಿಗೆ ಬಿಡುಗಡೆ ಮಾಡಿರುವ ಹಣವೆಷ್ಟು;

ಈ) ಬೀದರ್ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವುದನ್ನು ಸರಕಾರ ಗಮನಿಸಿದೆಯೇ;